ಸಾಕ್ಷಿಯಾಗಿತ್ತು. ಆದರೆ, ಸರಿಯಾದ ಟೀಕೆ ಟಿಪ್ಪಣಿಗಳಿಗೆ ಸರಿಯಾದ ಆಯುಧವೆಂದರೆ 'ನಿರ್ಲಜ್ಜ ನಿರ್ಲಕ್ಷ್ಯ'ವೇ. ಬತ್ತಲೆ ತಿರುಗುವವರ ರಾಜ್ಯದಲ್ಲಿ ಬಟ್ಟೆ ಹಾಕಿದವನೇ 'ಹುಚ್ಚ'. ಹೀಗಾಗಿ ನಾಯಕರು ಗೌರವವನ್ನು ನುಂಗಿಕೊಂಡು ಗೊಣಗಾಟ-ಕಹಿತನಗಳನ್ನು ಪಡೆದುಕೊಂಡರು. ಹೊರಮನದಲ್ಲಿ ಶಾಂತಚಿತ್ತರಾಗಿ ಒಳಮನದಲ್ಲಿ ಆತಂಕದಲ್ಲಿ ಲೀನರಾದರು. ತಾನು ನಂಬಿದ 'ನೈತಿಕತೆ'ಯ ಪಂಜರದಲ್ಲಿ ದಿನ ಕಳೆದರು. ಅವರ ಬದುಕಿನ ಕೊನೆಯ ದಶಕವಂತೂ 'ಒಳಸರಿತ'ದಲ್ಲೇ ಕಳೆಯಿತು. ಇಂಥ ಕೆಲವು ಅರ್ಥಗಳಲ್ಲಿ ಅವರು ನಮ್ಮ ಸಾಂಸ್ಕೃತಿಕ ಪರಿಸರದ 'ಡಾನ್ ಕ್ವಿಕ್ಸೋಟ್'. ತಮಗೆ ಗೊತ್ತಿರುವ ಸತ್ಯಗಳನ್ನು ಬಚ್ಚಿಟ್ಟುಕೊಂಡು ಪರಸ್ಪರ ಹೊಗಳಿಕೊಂಡು ಮುಂದೆಬಂದ 'ಜಾಣರು' ಸುಖವಾಗಿದ್ದರು, ಇದ್ದಾರೆ. ಅದರಿಂದಲೇ ನಾಯಕರದು 'ಅನನುಕರಣೀಯ' ಮಾದರಿ! ಅವರಿಗೆ ನಮಸ್ಕಾರ.

ಕನ್ನಡದಲ್ಲಿ ಎಲ್ಲರಿಂದಲೂ ಪ್ರೀತಿ, ಗೌರವಗಳನ್ನು ಪಡೆದ ವಿಮರ್ಶಕರಲ್ಲಿ ನಾಯಕರು ಬಹಳ ಮುಖ್ಯರು. ಅದರಲ್ಲೂ ನನ್ನ ಪೀಳಿಗೆಯವರಿಗೆ ಅವರು ಹಲವು ಕಾಲ ಅನುಕರಣೀಯ ಮಾದರಿಯಾಗಿದ್ದರು. ನಾನು ಬೇಂದ್ರೆಯವರನ್ನು ಕುರಿತು ಮಂಡಿಸಿದ ಮೊಟ್ಟಮೊದಲ ಸೆಮಿನಾರ್ ಭಾಷಣಕ್ಕೆ ಅವರು ಬರೆದು ಕಳಿಸಿದ ಮೂರು ಪುಟಗಳ ಪ್ರತಿಕ್ರಿಯೆ ನನಗೆ ಕೊಟ್ಟ ಆತ್ಮವಿಶ್ವಾಸ ಅಷ್ಟಿಷ್ಟಲ್ಲ. 'ಸಮಕಾಲೀನ', 'ಅನಿವಾರ್ಯ', 'ನಿರಪೇಕ್ಷ', 'ನಿಜದನಿ' ಮುಂತಾದ ಹೆಸರುಗಳೇ ನಮಗೆ ಅಗತ್ಯವೆನಿಸಿದ ಬರವಣಿಗೆಯ ಧೋರಣೆಗಳನ್ನು ಸೂಚಿಸುತ್ತಿದ್ದವು. ಅವರ ವಸ್ತುನಿಷ್ಠತೆ, ಪ್ರಾಮಾಣಿಕತೆ, ಮತ್ತು 'ದಿಟ್ಟತನ'ಗಳು ತರುಣಧಮನಿಗೆ ಆಕರ್ಷಕವೆನಿಸುತ್ತಿದ್ದವು. ಅದರಲ್ಲೂ ಬಹಳ ಆರ್ದ್ರವಾದ ಭಾವಲೋಕವನ್ನು ಬದಿಗಿಟ್ಟು ವಿಶ್ಲೇಷಣೆ, ಬೌದ್ಧಿಕತೆಯ ಆಧಾರದ ಮೇಲೆಯೇ ರೂಪಿತವಾಗಿದ್ದ ಬರವಣಿಗೆ ಅವರದು. ಅಂತೆಯೇ ವಿಮರ್ಶೆಯು ಸಂಸ್ಕೃತ ಕಾವ್ಯಮೀಮಾಂಸೆಯನ್ನಾಗಲೀ ಪಾಶ್ಚಾತ್ಯ ಸಾಹಿತ್ಯ ಸಿದ್ಧಾಂತಗಳನ್ನಾಗಲೀ ಅವರು ಅವಲಂಬಿಸಿರಲಿಲ್ಲ. ಕನ್ನಡ ಸಾಹಿತ್ಯದ ಗಂಭೀರ ವಿದ್ಯಾರ್ಥಿಯಾದ ಅವರು ಸಾಹಿತ್ಯದ ಆಕೃತಿಮೀಮಾಂಸೆ ಮತ್ತು ಅದರಲ್ಲಿ ಮೂಡಿಬರುವ ಜೀವನದರ್ಶನದ ಬಗ್ಗೆ ಆಸಕ್ತಿ ತಳೆಯುತ್ತಿದ್ದರು. ಲೇಖಕನ ವೈಯಕ್ತಿಕ ದರ್ಶನಕ್ಕೂ ತಾನು ಚಿತ್ರಿಸುವ ಪಾತ್ರಗಳನ್ನು ಅವನು 'ಮ್ಯಾನಿಪ್ಯುಲೇಟ್' ಮಾಡುವ ಬಗೆಗೂ ಇರುವ ಸಂಬಂಧದ ಕಡೆಗೆ ಅವರ ಸೂಕ್ಷ್ಮ ಗಮನ ಇರುತ್ತಿತ್ತು. ಮಾಸ್ತಿ, ಕಾರಂತ, ಕುವೆಂಪು ಮುಂತಾದ ಹಿರಿಯ ಲೇಖಕರೂ ಈ ಅಗ್ನಿಪರೀಕ್ಷೆಯಿಂದ ತಪ್ಪಿಸಿಕೊಳ್ಳುತ್ತಿರಲಿಲ್ಲ. ಸಾಹಿತ್ಯದ ಮಾಧ್ಯಮವಾದ ಭಾಷೆಯ ಬಗೆಗೆ ಲೇಖಕರು ತಳೆಯುವ ನಿಲುವು ನಾಯಕರಿಗೆ ನಿರ್ಣಾಯಕವಾಗಿರುತ್ತಿತ್ತು. ಆಕೃತಿಯು ಅರ್ಥವನ್ನು ಕೇವಲ ಸಂವಹನ ಮಾಡುವುದಿಲ್ಲ, ಬದಲಾಗಿ ಅರ್ಥವನ್ನು ರೂಪಿಸುತ್ತದೆ ಎಂದು ಅವರು ಖಚಿತವಾಗಿ ನಂಬಿದ್ದರು. ಅವರ ಬರವಣಿಗೆಯ ಹರಹು ನವ್ಯಸಾಹಿತ್ಯಕ್ಕೆ ಸೀಮಿತವಾಗಲಿಲ್ಲವೆನ್ನುವುದು ಬಹಳ ಮುಖ್ಯವಾದ ಸಂಗತಿ. ಪಂಪ, ರನ್ನ, ರಾಘವಾಂಕ, ಕುವೆಂಪು, ಕಾರಂತರ ಬಗ್ಗೆ ನಾಯಕರು ಸಾಕಷ್ಟು ಗಮನ ಹರಿಸಿದರು. ಎಲ್ಲವನ್ನೂ ಒಳಗೊಳ್ಳುವ ಈ ನಿಲುವು ಅನೇಕ ನವ್ಯ ಲೇಖಕರಿಗೆ ಇರಲಿಲ್ಲ. ಕೆಲವೊಮ್ಮೆ ಅದು ನವ್ಯರ ಅಳವಿಗೆ ಮೀರಿದ ಸಂಗತಿಯಾಗಿರುತ್ತಿತ್ತು.

ತಮ್ಮ ನಿಡುಗಾಲದ ಬಾಳಿನ ಹಲವು ಹಂತಗಳಲ್ಲಿ ನಾಯಕರು ವಿಭಿನ್ನವಾದ ಸವಾಲುಗಳನ್ನು ಎದುರಿಸಿದರು. ಆಧುನಿಕತೆಯ ಬಿಕ್ಕಟ್ಟುಗಳನ್ನು ಎದುರಿಸಿ, ಮೀರಿ ವಿಕಾಸವಾಗುತ್ತಾ, ಮೀರಲಾಗದೆ ಸೀಮಿತವಾಗುತ್ತಾ ಬೆಳೆದರು. ಆ ದ್ವಂದ್ವಗಳು ಮತ್ತು ಆ ಸೋಲು-ಗೆಲುವುಗಳು ನಮಗೂ ಪ್ರಸ್ತುತವೆಂದೇ ನನ್ನ ನಂಬಿಕೆ. ಈ ನನ್ನ ಬರಹ ಕೂಡಾ 'ಸಾಹಿತ್ಯ ವಿಮರ್ಶೆ'ಯ ಕ್ಷೇತ್ರದಲ್ಲಿ ಮತ್ತು ಅದರಾಚೆಗೆ ಅವರನ್ನು ಹುಡುಕುತ್ತಲೇ ನಮ್ಮನ್ನು ನಮ್ಮ ಕಾಲವನ್ನು ಕಂಡುಕೊಳ್ಳುವ ಪ್ರಯತ್ನ. ಅವರೇ ಕಲಿಸಿದ ವಿನಯ ಮತ್ತು ನಿಷ್ಠುರತೆಗಳೇ ನನಗೂ ಆದರ್ಶ. ಅವರ ಜೀವನವಿವರಗಳು ಮತ್ತು ಬರವಣಿಗೆ ಆ ಕೆಲಸಕ್ಕೆ ಇರುವ ಭಿತ್ತಿ.

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಸೂರ್ವೆ ಎಂಬ ಹಳ್ಳಿಯಿಂದ ಬಂದ ಗೋವಿಂದ ಹಮ್ಮಣ್ಣ ನಾಯಕರ 'ಬಾಳು', ಹಿಂದುಳಿದ ವರ್ಗಗಳಿಂದ ಬಂದ ಲಕ್ಷಾಂತರ ತರುಣ ತರುಣಿಯರು ಕಳೆದ ಶತಮಾನದಲ್ಲಿ ಕೈಗೊಂಡ ಪಯಣಕ್ಕೆ ಒಡ್ಡಿದ ಪ್ರತಿಮೆ. 'ಬಾಳು' ಅವರ ಆತ್ಮಕಥೆಯ ಹೆಸರು ಕೂಡಾ ಹೌದು. ಬಾಳು ಅವರ ತಾಯಿಯ ಹೆಸರು.